ಸದಸ್ಯೆಯೊಬ್ಬರ ಸಹೋದರನಿಗೆ ಹಿಗ್ಗಾಮುಗ್ಗಾ ಥಳಿತ, ಬಟ್ಟೆ ಬಿಚ್ಚಿಸಿ ಮೆರವಣಿಗೆ; ನಡುಗಡ್ಡೆ ಊರುಗಳಲ್ಲಿ ಅನ್ನ, ನೀರು, ಸೂರುಗಳಿಲ್ಲದೆ ಜನರ ನರಳಾಟ; ಜಲಪ್ರಳಯ ಕಂಡು ಕಳೆದ ಮೂರು ದಿನಗಳಿಂದ ನನಗೆ ನಿದ್ದೆಯೇ ಬರುತ್ತಿಲ್ಲ' ಎಂದ ಸಿಎಂ; ಡ್ಯಾಂ ಒಡೆದ ವದಂತಿ, ತತ್ತರಿಸಿದ ಜನತೆ; ನೆರೆಯಲ್ಲೂ ಪಕ್ಷಪಾತ: ನೆರೆರಾಜ್ಯಕ್ಕೆ 418 ಕೋಟಿ, ನಮಗೆ ಕೇವಲ 100 ಕೋಟಿ ರೂ! ಪರಿಹಾರ ಕಾರ್ಯದಲ್ಲಾದ ವಿಳಂಬಕ್ಕಾಗಿ ಜೆಇ ಮತ್ತು ಗ್ರಾ. ಪಂ. ಕಾರ್ಯದರ್ಶಿಗೆ ಥಳಿತ; ವಾಯುಭಾರ ಕುಸಿತದಿಂದಾಗಿ ಇನ್ನೆರಡು ದಿನ 712 ಮಿ.ಮೀ ಮಳೆ ಹಾಗೂ ಕರಾವಳಿಯುದ್ದಕ್ಕೂ ಗಂಟೆಗೆ 45 55 ಕಿ.ಮೀ ವೇಗದ ಗಾಳಿ ಬೀಸುವ ಸಾಧ್ಯತೆ; ನೆರವಿಗೆ ವೈದ್ಯರ ತಂಡ ಇಂದು; ಹರಿದು ಬಂದ ನೆರವು... ಬರೀ ಇವೇ ಸುದ್ದಿಗಳು ಪತ್ರಿಕೆಗಳ ತುಂಬ. ಯಾವ ಪತ್ರಿಕೆ ತೆಗೆದು ನೋಡಿದರೂ ಮೊದಲ ಪುಟದಲ್ಲಿ ಒದ್ದೆ ಮುದ್ದೆಯಾಗಿಸುವ ಮಳೆಯ ಸುದ್ದಿಯೇ. ಕುತೂಹಲದಿಂದ ತಮ್ಮ ಪತ್ರಿಕೆಯ ಮುಖಪುಟವೇನಿರಬಹುದೆಂದು ಹುಡುಕಾಡಿ ನೋಡಿದ. ಸಂಜೆ ಬಂದು ಪ್ರೂಫ್, ಪೇಜಿನೇಶನ್ ನೋಡ್ತೀನಿ ಅಂದವನಿಗೆ ನಿನ್ನೆ ಹೋಗಲಾಗಿರಲಿಲ್ಲ.

'ಪಾಂಡುರಂಗನೇ ಪಾಲಿಗೆ ಬಂದ' ಎಂಬ ಬ್ಯಾನರ್ ಹೆಡ್ ವರದಿ ದಪ್ಪಕ್ಷರದಲ್ಲಿ ಮೊದಲ ಪುಟದ ಅರ್ಧದಷ್ಟು ಭಾಗವನ್ನು ಆಕ್ರಮಿಸಿಕೊಂಡಿತ್ತು. ಬಿಸ್ಲೂರ ಮಠದಲ್ಲಿ ತಂಗಿದ್ದ ಸ್ವಾಮೀಜಿಗಳ ಸವಿವರವಾದ ಸಂದರ್ಶನ ಮಾಡಲಾಗಿತ್ತು. ಉಳಿದ ಕೆಳಗಿನ ಭಾಗದಲ್ಲಿ ಎರಡು ಸುದ್ದಿಗಳು ಸಮಾನ ಸ್ಥಾನ ಮತ್ತು ಪ್ರಾಧಾನ್ಯದೊಂದಿಗೆ ಪ್ರಕಟವಾಗಿದ್ದವು. ಅದರಲ್ಲಿ ಒಂದು 'ಪಡಿತರ ಹಂಚಿದ ಅಭಿನವ ಕರ್ಣ' ಎಂಬುದು. ಅದರಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ತಾವು ಪ್ರತಿನಿಧಿಸುವ ಕ್ಷೇತ್ರದ ಹಳ್ಳಿಯೊಂದರ ದಲಿತ ವಿಧವೆ ಮುದುಕಿಗೆ ಹೆಚ್ಚೆಂದರೆ ಸಾವಿರ ರೂಪಾಯಿ ಬೆಲೆಬಾಳುವ ಅಕ್ಕಿ, ಬೇಳೆ, ಜೋಳ ಇತ್ಯಾದಿಗಳನ್ನು ಹಂಚಿದ ಮತ್ತು ಅವಳ ಕಾಲಿಗೆರಗಿ ಕ್ಯಾಮೆರಾ ಕಡೆಗೆ ನೋಡುತ್ತಿರುವ ಫೋಟೊಗಳು ಗಮನ ಸೆಳೆಯುವಂತಿದ್ದವು. ಮತ್ತೊಂದು ಸುದ್ದಿ ಸಂತ್ರಸ್ತರೊಂದಿಗೆ ಸಂಜೆ, ಕಂಬನಿ ಮಿಡಿದ ಡೀಸಿ' ಎಂಬುದು. ಹಳ್ಳಿಯೊಂದರ ಕೊಚ್ಚೆಗುಂಡಿ ಹಾರುತ್ತಿರುವ ಹಾಗೂ ಸಿಂಬಳ ಸುರಿಸುವ ಮಗುವೊಂದನ್ನು ತೊಡೆ ಮೇಲೆ ಕೂರಿಸಿಕೊಂಡು ಗಂಜಿ ಕೇಂದ್ರದಲ್ಲಿ ಉಣ್ಣುತ್ತಿರುವ ಅವರ ಫೋಟೊಗಳೊಂದಿಗೆ ಆ ವರದಿ ಪ್ರಕಟವಾಗಿತ್ತು.

'ಸರ್ ಇಳೀರಿ' ಎಂದ ಅಬ್ದುಲ್ಲ.

ಕೆಳಗಿಳಿದ ತಿಮೋತಿ ಮೈಮುರಿಯುತ್ತ ಅಲ್ಲಿನ ವಾತಾವರಣವನ್ನು ಕಣ್ತುಂಬಿಕೊಳ್ಳತೊಡಗಿದ.

ಕೃಷ್ಣಾ ನದಿ ತೀರದ ಕೆಸರಟ್ಟಿ ಎಂಬ ಆ ಊರನ್ನು ಊರು ಬರುವುದಕ್ಕಿಂತ ಇನ್ನೂ ಕೆಲ ಫರ್ಲಾಂಗುಗಳ ಮುಂಚೆಯೇ ಇರುವಂಥ ಪುನರ್ವಸತಿ ಕ್ಯಾಂಪಿಗೆ ತಾತ್ಕಾಲಿಕವಾಗಿ ಸ್ಥಳಾಂತರಿಸಲಾಗಿತ್ತು. ಅಲ್ಲಿ ಕೆಲವರು ಪ್ಲಾಸ್ಟಿಕ್ ಬರಕಗಳಿಂದ ಟೆಂಪೊರರಿ ಗುಡಿಸಲು ಹಾಕಿಕೊಂಡಿದ್ದರೆ ಮಿಕ್ಕವರು ಮರಗಳ ನೆರಳನ್ನಾಶ್ರಯಿಸಿ ಮಾತಿಗೆ ತೊಡಗಿದ್ದರು. ತಗಡಿನ ಶೀಟುಗಳಿಂದ ಒಂದೇ ಸಾಲಿನಲ್ಲಿ ಬರುವಂತೆ ಕೂಡುಮನೆಗಳ ತಾತ್ಕಾಲಿಕ ಪುನರ್ವಸತಿಯ ನಿರ್ಮಾಣಕ್ಕಾಗಿ ಅಷ್ಟಿಷ್ಟು ಸಾಮಗ್ರಿಗಳೇನೋ ಅಲ್ಲಿ ಬಂದು ಬಿದ್ದಿದ್ದವು. ಆದರೆ ನಿರ್ಮಾಣ ಕಾರ್ಯವಿನ್ನೂ ಶುರುವಾಗಿರಲಿಲ್ಲ.

ತಂಡದ ಪ್ರತಿಯೊಬ್ಬರು ಒಂದೊಂದು ಹೆಗಲ ಚೀಲ ತೆಗೆದುಕೊಂಡು ಅವುಗಳಲ್ಲಿ ಬಿಸ್ಕತ್ ಪ್ಯಾಕೆಟ್‌ಗಳನ್ನು ತುಂಬಿಸಿಕೊಂಡು ಒಬ್ಬೊಬ್ಬರಾಗಿ ಕೆಳಗಿಳಿದು ಕರಗಿಹೋದರು. ತಿಮೋತಿ ಮತ್ತು ಅಬ್ದುಲ್ ಜೊತೆಯಾಗಿ ಸಾಗಿರುವಾಗ ತಿಮೋತಿ ಅಂದ 'ಗಾಡಿ ಇನ್ನ ಸ್ವಲ್ಪ ಒಳಗೆ ಒಯ್ಬಹುದಿತ್ತು'

'ಏ ಬ್ಯಾಡ ಸರ್. ಇವತ್ತು ಮುಂಜಾನೆ ಏನಾಗ್ಯಾದ ಗೊತ್ತಾದಿಲ್ಲ ನಿಮಗ?' ಕೇಳಿದ ಅಬ್ದುಲ್ಲ. ಗೊತ್ತಿಲ್ಲವಲ್ಲ ಎಂಬಂತೆ ನೋಡಿದ ತಿಮೋತಿ.

'ಮುಂಜಾನೆ ಬೆಳಬೆಳಗ್ಗೆ ತಂಪು ಹೊತ್ನ್ಯಾಗ ಎಂಎಲ್‌ಎ ಸಾಬ್ರು ತಶೀಲ್ದಾರನ್ನ ಜತೀಗಿ ಹಾಕ್ಕಂಡು ಮಾಲಮಾರಿಗೆ ಹೋಗ್ಯಾರ. ಎರಡು ದಿವಸಲಿಂದ ಯಾರೂ ಆ ಕಡೆ ತೆಲೆನೇ ಹಾಕಿಲ್ಲಂತ. ಮಂದಿಗೆ ಅಲ್ಲಿಗೆ ರೋಸಿಗಿಟ್ಟು ಹೋಗ್ಯಾದ. ಇವರು ಹೋಗಿ ಅದೇ 'ನೋಡಮು, ಮಾಡಮು' ಅಂಬಂಥ ಮಾತಾಡಿದಾಗ ಜನರ ಪಿತ್ತ ನೆತ್ತಿಗೇರಿ ಮಾತಿಗೆ ಮಾತು ಬೆಳೆದು ಬಡಿಗೆ ಬೆತ್ತ ತಗೊಂಡು ಮೆತ್ತಗ ಹಾಕ್ಯಾರ. ಕಾರು, ಜೀಪುಗಳು ಸಮಿತಿಗಿ ಕಂಡೆಮ್ ಆಗ್ಯಾವ. ಇವರು ಓಡಿ ಬರುತಿದ್ರೆ ಹೆಣಮಕ್ಕಳು, ಹುಡುಗ್ರು ಕಲ್ತು ಹುಚ್ಚರಿಗೆ ಒಗೆದಂಗ ಕಲ್ಲು ಬೀಸಿ ಬೀಸಿ ಒಗದಾರಂತ ನೋಡ್ರಿ. ಇನ್ನ ಮೂವರು ಪೋಸಿಗಳು ಜತಿಗಿ ಎಸ್ಕಾರ್ಟಿಂಗ್ ಇದ್ರಂತ ಸರೆ ಹೋಯ್ತಂತ. ಇಲ್ಲಂದ್ರೆ ವಾಪಸ್ ಬರದು ಭಾಳ ಕಷ್ಟ ಇತ್ತಂತ'

'ಅಲ್ರಿ ಅವರು ಮಾಡಿದ್ರಾಗ ತಪ್ಪನ್ನ ಏನಾದ ಬುಡ್ರಿ. ಅಲ್ಲಿ ಇನ್ನ ಒಂದು ಗಂಜಿ ಕೇಂದ್ರ ಗೂಡ ಸ್ಟಾರ್ಟ್ ಆಗಿಲ್ಲ ಅಂದ್ರೆ ಮಂದಿ ಯಾಕ ಸುಮ್ಮಿದ್ದಾರು?' ಎಂದ ತಿಮೋತಿ.

ಹೀಗೆ ಮಾತಾಡುತ್ತ ಮುಖ ಚಹರೆಯ ಅಂದಾಜಿನಲ್ಲಿ ಹಸಿದವರನ್ನು ಗುರುತಿಸಿ, ಸಪ್ಪಳಾಗದಂತೆ ಕಣ್ಣಲ್ಲೇ ಕರೆದು ಬಿಸ್ಕತ್ ಪ್ಯಾಕೆಟ್‌ಗಳನ್ನು ಕೊಡುತ್ತ ಹೋದರು. ಮಕ್ಕಳು, ಮುದುಕರು, ಹೆಂಗಸರು.. ಎಲ್ಲರ ಕಂಗಳಲ್ಲೂ ದೈನ್ಯತೆ, ಯಾಚನೆ. ಬಿಸ್ಕತ್ ಪ್ಯಾಕೆಟ್ ಪಡೆದವರು ಹೆಮ್ಮೆಯಿಂದ ಅವನ್ನು ಹಿಡಿದೆತ್ತಿ ಪ್ರದರ್ಶಿಸುತ್ತ ಪುಕ್ಕಟ್ಟೆ ಪ್ರಚಾರ ಕೊಡತೊಡಗಿದ ಪರಿಣಾಮವಾಗಿ ಮತ್ತಷ್ಟು ಮಕ್ಕಳು, ಹೆಂಗಸರು ಅವರ ಕಡೆ ಧಾವಿಸಿ ಬರತೊಡಗಿದರು. ಬಂದವರಿಗೆಲ್ಲ ಸಾಲಾಗಿ ನಿಲ್ಲಿಸಿ ಕೊಡತೊಡಗಿದಾಗ ಈ ಮೊದಲು ತೆಗೆದುಕೊಂಡ ಒಬ್ಬಾಕೆ ಮತ್ತೆ ಬಂದಳು.

'ಏನಮ್ಮ ಒಮ್ಮೆ ಆವಾಗ್ಲೇ ಒಯ್ದಿಯಲ್ಲ. ಬ್ಯಾರೆವರಿಗೆ ಕೊಡದು ಬ್ಯಾಡೇನು?' ಅಂದ ಅಬ್ದುಲ್.

'ನನಿಗಲ್ಲ ಸಾರು. ಅಲ್ಲಿ ನಮ್ಮಮ್ಮ ಐದಾಳ ಟೆಂಟ್ನ್ಯಾಗ. ಅಕಿಗೆ ಬೇಕು' ಅಂದು ಆ ಕಡೆ ಬೆರಳು ಮಾಡಿ ತೋರಿಸಿದಳಾಕೆ. ದೂರ ಟೆಂಟಿನಲ್ಲಿ ಒಬ್ಬ ಮುದುಕಿ ಅವರತ್ತ ನೋಡಿ ಎರಡೂ ಕೈಯೆತ್ತಿ ನಮಸ್ಕರಿಸಿದಳು. ತನ್ನ ಹೆಗಲ ಬ್ಯಾಗಿನಿಂದ ಸಟ್ಟನೆ ಒಂದು ಬಿಸ್ಕತ್ ಪ್ಯಾಕೆಟನ್ನು ತೆಗೆದು ಅವಳ ಕೈಗಿತ್ತ ತಿಮೋತಿ. ಅವಳು ಸೀರೆಯ ಸೆರಗಲ್ಲಿ ಅದನ್ನು ಮಡಿಚಿಟ್ಟುಕೊಂಡು ಒಂದೇ ಓಟದಲ್ಲಿ ಓಡಿ ತನ್ನ ತಾಯಿಯನ್ನು ಕೂಡಿಕೊಂಡಳು. ತಾಯಿ ಮಗಳು ಸೇರಿ ಆತುರಾತುರವಾಗಿ ಬಿಸ್ಕತ್ ಪ್ಯಾಕೆಟ್ಟನ್ನು ಹರಿಯುತ್ತಿರುವ ದೃಶ್ಯ ತಿಮೋತಿಯ ಕಣ್ಣಲ್ಲಿ ನೀರು ಜಿನುಗಿಸಿತು.

'ಎಮೋಶನಲ್ ಆಗಬ್ಯಾಡ್ರಿ ಸರ್. ಕಂಟ್ರೋಲ್' ಎಂದ ಅಬ್ದುಲ್.

ಅದು ಸರಿಯೇ. ಮಾನವೀಯ ಗುಣಗಳ ದೃಷ್ಟಿಯಿಂದ ನೋಡಿದರೆ ಅಬ್ದುಲ್ಲನ ಹತ್ತಿರಕ್ಕೂ ಸುಳಿಯಲಾರ ತಿಮೋತಿ. ಆದರೆ ಅಪಾರವಾದ ಕರುಣೆಯ ಕಡಲನ್ನು ಒಡಲಲ್ಲಿಟ್ಟುಕೊಂಡಿರುವ ಅಬ್ದುಲ್ಲ ಕಾಣುವುದು ಮಾತ್ರ ಮಹಾ ಒರಟನಂತೆ. ಅದಕ್ಕೆ ಕಲಶವಿಟ್ಟಂತೆ ಆ ಕುರೂಪಿ ಗಡ್ಡ ಬೇರೆ. ಮಹಾನಿಷ್ಠೆಯ ಈ ಮನುಷ್ಯ ಬಿಸಿಲೂರಿನ ಹಲವು ಸ್ಥಳೀಯ ಪತ್ರಿಕೆ ಮತ್ತು ಟೀವಿ ಚಾನೆಲ್ಲುಗಳಿಗೆ ರಿಲಯಬಲ್ ನ್ಯೂಸ್ ಸೋರ್ಸ್. ಬಹುತೇಕ ಪತ್ರಕರ್ತರೊಂದಿಗೆ ಆತನಿಗೆ ಒಳ್ಳೆ ಇಕ್ವೇಶನ್ ಇದ್ದರೂ ಯಾವುದನ್ನೂ ಸ್ವಾರ್ಥಕ್ಕಾಗಿ ಬಳಸಿಕೊಂಡವನಲ್ಲ. ಆತನ ಉಗ್ರ ಪ್ರಾಮಾಣಿಕತೆ ಮತ್ತು ನೈತಿಕತೆಗಳಿಂದಾಗಿಯೇ ಆತ ಹಲವರಿಗೆ ಇಷ್ಟವಾಗುತ್ತಾನೆ. ಮತ್ತೂ ಕೆಲವರಿಗೆ ನುಂಗಲಾರದ ಕಷ್ಟವಾಗಿದ್ದಾನೆ. ಅವನ ಮಾತಿನಲ್ಲಿ ತಥ್ಯವಿಲ್ಲದೆ ಇಲ್ಲ. ಇಂಥಲ್ಲಿ ಕೆಲಸ ಮಾಡುವಾಗ ಪ್ರತಿಯೊಬ್ಬನಿಗೂ ವೈದ್ಯನೊಬ್ಬನ ನಿರ್ಲಿಪ್ತವಾದ ಸಮಚಿತ್ತದ ಸೇವಾ ಮನೋಭಾವವಿರಬೇಕಾಗುತ್ತದೆ ಎಂದುಕೊಂಡ ತಿಮೋತಿ.

ಇಬ್ಬರೂ ಉಚ್ಚೆ ಹೊಯ್ಯಲು ಜಾಗ ಹುಡುಕುತ್ತ ಅಲ್ಲಿ ಸ್ವಲ್ಪ ದೂರದಲ್ಲಿ ಪಾಳು ಬಿದ್ದಿದ್ದ ಒಂದು ಕಟ್ಟಡದ ಕಡೆ ನಡೆದರು. ಅದರಾಚೆಗೆ ಜಿಲ್ಲಾಡಳಿತದ ವತಿಯಿಂದ ತೆರೆಯಲಾದ ಗಂಜಿಕೇಂದ್ರವಿತ್ತು. ಅಲ್ಲೊಬ್ಬ ಬೋಗುಣಿ ತೊಳೆಯುತ್ತಿದ್ದರೆ ಮತ್ತಿಬ್ಬರು ಆ ಹಗಲಿನಲ್ಲೇ ವಿಸ್ಕಿಯ ಟೆಟ್ರಾಪ್ಯಾಕುಗಳನ್ನು ಬರಿದು ಮಾಡಿ ಕುಳಿತಲ್ಲೇ ತೂರಾಡುತ್ತಿದ್ದರು. ತಿಮೋತಿ ಬೋಗುಣಿ ತೊಳೆಯುತ್ತಿದ್ದವನನ್ನು ಮಾತಿಗೆಳೆದಾಗ ಗೊತ್ತಾಗಿದ್ದೇನೆಂದರೆ ಅಲ್ಲಿರುವ ನೂರೈವತ್ತು ಜನರಿಗಾಗಿ ಅಂದು ಕೇವಲ ಇಪ್ಪತ್ತು ಕೇಜಿ ಉಪ್ಪಿಟ್ಟು ಮಾಡಲಾಗಿತ್ತಂತೆ.

'ನೀವು ಗಟ್ಟಿಸಿ ಕೇಳ್ಬೇಕಿಲ್ಲ' ಎಂದ ತಿಮೋತಿ.

'ರವ ತಂದು ಕೊಟ್ಟ ವಾಲೀಕಾರಗ ಇಪ್ಪತ್ತು ಕೇಜಿ ಇಷ್ಟೊಂದು ಜನರಿಗೆ ಸಾಲಿಮಿ ಬುಳತ್ತ ಅಂತ ಹೇಳಿದ್ವಿ ನಾವು. ಅದಕ್ಕಾತ 'ಕುಲಕರ್ಣಿ ಇಷ್ಟೇ ಕೊಡಿಸಿ ಕಳಿಸ್ಯಾನ ನಾನೇನ್ಮಾಡ್ಲಿ, ನೀವು ಬಲ, ನಿಮ್ ಕುಲಕಣ್ಣಿ ಬಲ. ನಾನೊಂಟೆ' ಅಂದು ಕಿತ್ತಿಕೆಂಡು ಹೋಗಿಬುಟ್ಟ ಸಾರು. ಮತ್ತೇನ್ಮಾಡ್ತಿ ನಿರ್ವಿಲ್ಲ. ಅಂಗೇ ಮಾಡ್ಯಾಕಿದಿವಿ. ಸಿಕ್ಕವರಿಗೆ ಸಿಗಿತು, ಇಲ್ಲದವರಿಗಿಲ್ಲ' ಎಂದ ಆತ.

ಟೀಮಿನ ಹುಡುಗರಾಗಲೇ ಸುಮೋ ಸೇರಿಕೊಂಡಾಗಿತ್ತು.